# ವಾಟ್ಸ್‌ಆ್ಯಪ್ ವೆಬ್‌ಗೂ ವಿಡಿಯೊ ಕಾಲ್!

ವಿಡಿಯೊ ಕರೆಗಳ ಸವಲತ್ತು ಬೇಕು ಎನ್ನುವ 'ವಾಟ್ಸ್‌ಆ್ಯಪ್ ವೆಬ್' ಬಳಕೆದಾರರ ಬೇಡಿಕೆ ಕೆಲ ವಾರಗಳಲ್ಲಿ ಈಡೇರಲಿದೆ.

**■ ಶಶಿಕುಮಾರ್ ಸಿ.**



ಗ್ರಾಹಕಸ್ನೇಹಿ ಫೀಚರ್‌ಗಳನ್ನು ಪರಿಚಯಿಸುವಲ್ಲಿ ಹೆಚ್ಚು ಕ್ರಿಯಾಶೀಲವಾಗಿರುವ ವಾಟ್ಸ್‌ಆ್ಯಪ್, ಸದ್ಯ ತನ್ನ 'ವಾಟ್ಸ್‌ಆ್ಯಪ್ ವೆಬ್' ಬಳಕೆದಾರರಿಗೆ ಅನುಕೂಲವಾಗುವಂತಹ ಸೇವೆಯೊಂದನ್ನು ಬಿಡುಗಡೆ ಮಾಡುವುದಾಗಿ ಪ್ರಕಟಿಸಿದೆ. ಅದುವೇ ವಾಟ್ಸ್‌ಆ್ಯಪ್ ವೆಬ್ ಆಡಿಯೊ ಕರೆ ಮತ್ತು ವಿಡಿಯೊ ಕರೆ ಸೌಲಭ್ಯ ಒಳಗೊಂಡಿರುವ ಫೀಚರ್.

ಮೊಬೈಲ್ ಬಳಕೆದಾರರಿಗೆ ಅಗತ್ಯವಾದ ಫೀಚರ್‌ಗಳನ್ನು ಪರಿಚಯಿಸುವುದರಲ್ಲೇ ಹೆಚ್ಚು ಉತ್ಸಾಹಿಯಾಗಿದ್ದ ವಾಟ್ಸ್‌ಆ್ಯಪ್ ಬಗ್ಗೆ ಅದರ ವೆಬ್ ಬಳಕೆದಾರರಿಗೆ, 'ತಮಗೆ ಅಗತ್ಯವಾದ ಫೀಚರ್‌ಗಳನ್ನು ಅಭಿವೃದ್ಧಿಪಡಿಸುತ್ತಿಲ್ಲ' ಎಂಬ ಸಣ್ಣ ಅಸಮಾಧಾನವಿತ್ತು. ಈ ಬಗ್ಗೆ ಎಚ್ಚೆತ್ತುಕೊಂಡಿರುವ ಫೇಸ್‌ಬುಕ್ ಒಡೆತನದ ವಾಟ್ಸ್‌ಆ್ಯಪ್ ವೆಬ್ ಮಾದರಿಗೂ ಅಗತ್ಯವಾದ ಫೀಚರ್‌ಗಳನ್ನು ಅಭಿವೃದ್ಧಿಪಡಿಸುವಲ್ಲಿ ನಿರತವಾಗಿದೆ.

ತನ್ನ ವೆಬ್ ಮಾದರಿಯನ್ನು ಇನ್ನಷ್ಟು ಪರಿಣಾಮಕಾರಿಗೊಳಿಸಲು ಧ್ವನಿ ಕರೆ ಹಾಗೂ ವಿಡಿಯೊ ಕರೆ ಒಳಗೊಂಡ ಫೀಚರ್ ಅನ್ನು ಇನ್ನು ಕೆಲವೇ ದಿನಗಳಲ್ಲಿ ಒದಗಿಸಲಿದೆ. ಕಚೇರಿ ಸಮಯ ಸೇರಿದಂತೆ ಬಹುತೇಕ ಸಂದರ್ಭಗಳಲ್ಲಿ ಬಳಕೆದಾರರು ಮೊಬೈಲ್ ಆಧಾರಿತ ವಾಟ್ಸ್‌ಆ್ಯಪ್ ಬಳಕೆಗಿಂತ ವಾಟ್ಸ್‌ಆ್ಯಪ್ ವೆಬ್ ಮಾದರಿಯನ್ನೇ ಹೆಚ್ಚು ಬಳಸುತ್ತಾರೆ. ಇತರ ಕೆಲಸದೊಂದಿಗೆ ವೆಬ್ ಮಾದರಿಯನ್ನು ನಿರ್ವಹಿಸುವುದು ಸುಲಭ. ಇದೇ ಕಾರಣಕ್ಕೆ ಸಾಕಷ್ಟು ಮಂದಿ ವೆಬ್ ಆವೃತ್ತಿಯನ್ನೇ ಮನೆ ಹಾಗೂ ಕಚೇರಿ ಸೇರಿದಂತೆ ಇನ್ನಿತರ ಸಂದರ್ಭಗಳಲ್ಲಿ ಬಳಸುತ್ತಾರೆ. ಆದರೆ, ವೆಬ್ ಆವೃತ್ತಿಯಲ್ಲಿ ಧ್ವನಿ ಕರೆ ಹಾಗೂ ವಿಡಿಯೊ ಕರೆ ಮಾಡುವ ಅವಕಾಶ ಲಭ್ಯವಿರಲಿಲ್ಲ. ಮೊಬೈಲ್ ಆವೃತ್ತಿಯಲ್ಲಿ ಈ ಆಯ್ಕೆಯನ್ನು ಕಲ್ಪಿಸಿ ಸಾಕಷ್ಟು ಸಮಯವೇ ಆಗಿತ್ತು. ಹೀಗಾಗಿ ವಾಟ್ಸ್‌ಆ್ಯಪ್ ವೆಬ್‌ನಲ್ಲಿಯೂ ವಿಡಿಯೊ ಮತ್ತು ವಾಯ್ಸ್ ಕರೆ ಇದ್ದಿದ್ದರೆ ಅನುಕೂಲವಾಗುತ್ತಿತ್ತು ಎನ್ನುವುದು ಬಳಕೆದಾರರ ಅಪೇಕ್ಷೆಯಾಗಿತ್ತು. ಅವರ ನಿರೀಕ್ಷೆಗನುಗುಣವಾಗಿ ಹೊಸ ಫೀಚರ್ ಅನ್ನು ವಾಟ್ಸ್‌ಆ್ಯಪ್ ಪರಿಚಯಿಸಹೊರಟಿದೆ.

ವಾಟ್ಸ್‌ಆ್ಯಪ್ ವೆಬ್‌ನಲ್ಲಿ ವಾಯ್ಸ್ ಕರೆ ಮತ್ತು ವಿಡಿಯೊ ಕರೆ ಹೇಗೆ ಮೂಡಿ ಬರಲಿದೆ ಎನ್ನುವುದಕ್ಕೆ ಸಂಬಂಧಿಸಿದಂತೆ ಕೆಲವು ಸ್ಕ್ರೀನ್‌ಶಾಟ್ ಫೋಟೊಗಳನ್ನು ವಾಟ್ಸ್‌ಆ್ಯಪ್ ತನ್ನ ಬ್ಲಾಗ್‌ನಲ್ಲಿ ಹಂಚಿಕೊಂಡಿದೆ. ಕಾಲ್ ಮತ್ತು ವಿಡಿಯೋ ಕಾಲ್ ಫೀಚರ್ಸ್ ಹೇಗಿರಲಿವೆ ಎನ್ನುವ ಸ್ಕ್ರೀನ್‌ಶಾಟ್‌ಗಳನ್ನು ವಾಟ್ಸಾಪ್ ಸಂಸ್ಥೆ ಆನ್‌ಲೈನ್‌ನಲ್ಲಿ ಹಂಚಿಕೊಂಡಿದೆ.

ವಾಟ್ಸ್‌ಆ್ಯಪ್‌ನಲ್ಲಿ ಒಳ ಕರೆ ಬಂದಾಗ ಹೊಸ ಪಾಪ್‌ಅಪ್ ವಿಂಡೊ ಪರದೆಯ ಮೇಲೆ ಕಾಣಿಸಿಕೊಳ್ಳುತ್ತದೆ. ಕರೆಗಳನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ಆಯ್ಕೆಯನ್ನೂ ನೀಡಲಾಗಿದೆ. ಅದರಂತೆಯೇ ವಾಟ್ಸ್‌ಆ್ಯಪ್ ವೆಬ್‌ನಲ್ಲಿ ಕರೆ ಮಾಡಿದಾಗ ಸಣ್ಣ ವಿಂಡೊ ಕಾಣಿಸಿಕೊಳ್ಳುತ್ತದೆ. ಕರೆ ಸ್ವೀಕರಿಸುವ ಅಥವಾ ನಿರಾಕರಿಸುವ ಆಯ್ಕೆಗಳನ್ನೂ ನೀಡಲಾಗಿದೆ. ಈ ಫೀಚರ್‌ನಲ್ಲಿ ಗ್ರೂಪ್ ವಾಯ್ಸ್ ಮತ್ತು ವಿಡಿಯೊ ಕರೆಗಳನ್ನು ಮಾಡಲು ಅನುವು ಮಾಡಿಕೊಡಲಾಗುತ್ತದೆ.

ವಾಟ್ಸ್‌ಆ್ಯಪ್ ವೆಬ್ ಆವೃತ್ತಿಯೂ ವಿಡಿಯೊ ಕರೆಯನ್ನು ಬೆಂಬಲಿಸುವುದರಿಂದ ವಿಡಿಯೊ ಕಾನ್ಫರೆನ್ಸ್ ನಡೆಸಲು ಬಳಕೆದಾರರಿಗೆ ಅವಕಾಶ ಸಿಗಲಿದೆ. ಅಲ್ಲದೆ ಬಳಕೆದಾರರು ತಮ್ಮ ಫೋನ್‌ಗಳಿಗೆ ಬದಲಾಯಿಸದೆ, ಡೆಸ್ಕ್‌ಟಾಪ್‌ನಿಂದ ತ್ವರಿತವಾಗಿ ಕರೆಗಳನ್ನು ಮಾಡಲು ಇದು ಸುಲಭವಾದ ಮಾರ್ಗವಾಗಿದೆ. ಸದ್ಯ ಈ ಫೀಚರ್ ಪ್ರಾಯೋಗಿಕ ಹಂತದಲ್ಲಿದ್ದು. ■

ಓಂ ✝ ☪ ಸರ್ವೇಜನಃ ಸುಖಿನೋ ಭವಂತುಃ ಓಂ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.